

# ಎಚ್ಚೆಸ್ವಿ ಟುವ್ವಿ ಟುವ್ವಿ!

**ಕನ್ನಡದ ಹಿರಿಯ ಕವಿ ಎಚ್ಚೆಸ್ವಿ ಸಿನಿಮಾ ನಿರ್ದೇಶನದ ಪ್ರಯೋಗಕ್ಕೆ ತಮ್ಮನ್ನೊಡ್ಡಿಕೊಂಡಿದ್ದಾರೆ. ದೀಪಾವಳಿ ವೇಳೆಗೆ ಅವರ ನಿರ್ದೇಶನದ 'ಹಸಿರು ರಿಬ್ಬನ್' ರೂಪುಗೊಳ್ಳಲಿದೆ.**

**■ ರಘು**

'ಈ ವಯಸ್ಸಿನಲ್ಲಿ ಹೊಸತೊಂದು ಸಾಹಸದಲ್ಲಿ ತೊಡಗಿಕೊಂಡಿದ್ದೇನೆ'. ಕವಿ ಎಚ್.ಎಸ್. ವೆಂಕಟೇಶಮೂರ್ತಿ ನಗುತ್ತಾ ಹೇಳಿದರು. ಅವರು ಹೇಳಿದ ಸಾಹಸ ಸಿನಿಮಾ ನಿರ್ದೇಶನಕ್ಕೆ ಸಂಬಂಧಿಸಿದ್ದು. ಎಪ್ಪತ್ತಮೂರರ ವಯಸ್ಸಿನಲ್ಲಿ ಅವರು ಸಿನಿಮಾ ನಿರ್ದೇಶಕರಾಗುತ್ತಿದ್ದಾರೆ. 'ಹಸಿರು ರಿಬ್ಬನ್' ಚಿತ್ರದ ಹೆಸರು.

ಎಚ್ಚೆಸ್ವಿ ಅವರಿಗೆ ಸಿನಿಮಾ ಮಾಧ್ಯಮ ಹೊಸತೇನೂ ಅಲ್ಲ. ಕನ್ನಡದ ಮಕ್ಕಳ ಮನಸ್ಸು ಗೆದ್ದಿರುವ 'ಚಿನ್ನಾರಿಮುತ್ತ'ದ ಕಥೆ, ಹಾಡುಗಳು ಅವರವೇ. 'ಕೊಟ್ರೇಶಿ ಕನಸು' ಚಿತ್ರಕ್ಕೆ ಅವರು ಬರೆದ ಗೀತೆಗಳೂ ಜನಪ್ರಿಯವಾಗಿದ್ದವು. ಇದರ ಜೊತೆಗೆ ಎಚ್ಚೆಸ್ವಿ ಅವರ ಕೆಲವು ಭಾವಗೀತೆಗಳು ಸಿನಿಮಾಗಳಲ್ಲಿ ಬಳಕೆಯಾಗಿವೆ. ನಿಖಿಲ್ ಮಂಜಯ್ಯ ನಿರ್ದೇಶನದ 'ಒಂದೂರಲ್ಲಿ' ಚಿತ್ರದ ಸಾಹಿತ್ಯವೂ ಅವರದೇ. ಗಿರೀಶ ಕಾಸರವಳ್ಳಿ, ಎಂ.ಎಸ್. ಸತ್ಯು ಅವರ ಜೊತೆ ಕೂಡ ಎಚ್ಚೆಸ್ವಿ ಕೆಲಸ ಮಾಡಿದ್ದಾರೆ. ಹೀಗೆ ಒಂದಲ್ಲಾ ಒಂದು ಬಗೆಯಲ್ಲಿ ಚಿತ್ರರಂಗದೊಂದಿಗೆ ನಂಟು ಹೊಂದಿರುವ ಅವರು, ಆ ಬಂಧವನ್ನೀಗ ನಿರ್ದೇಶನದ ಮೂಲಕ ಹೊಸ ಮಜಲಿಗೆ ಒಯ್ಯುತ್ತಿದ್ದಾರೆ.

ಅಮಾಯಕರು ವಂಚನೆಗೊಳಗಾಗುವ ಕಥೆ ಚಿತ್ರದ್ದು. ಮನುಷ್ಯ ಸಂಬಂಧಗಳ ಹಲವು ಮುಖಗಳ ದರ್ಶನ ಈ ಸಿನಿಮಾದಲ್ಲಿ ಆಗುತ್ತದಂತೆ. 'ಈಗಿನ ಕಾಲದ ರಾಕ್ಷಸರು ಹೇಗಿರ್ತಾರೆ ಎನ್ನುವುದನ್ನು ತೋರಿಸುವ ಪ್ರಯತ್ನ ಸಿನಿಮಾದಲ್ಲಿ ಇರಲಿದೆ. ಈ ಹೊತ್ತಿನ ರಕ್ಕಸರಿಗೆ ಕೋರೆಹಲ್ಲು ಇರುವುದಿಲ್ಲ. ಕೆಂಪು ಕಣ್ಣು, ಅಟ್ಟಹಾಸದ ನಗೆಯೂ ಇರುವುದಿಲ್ಲ. ಅವರು ನಮ್ಮ ಹಾಗೆಯೇ ಇರುತ್ತಾರೆ, ನಮಗೆ ತಿಳಿಯದೆಯೇ ಗುಳುಂ ಮಾಡುತ್ತಾರೆ. ಇದು ಚಿತ್ರದ ಥೀಮ್' ಎನ್ನುತ್ತಾರೆ ಎಚ್ಚೆಸ್ವಿ. ಅಂದ ಹಾಗೆ, ಚಿತ್ರದ ಕಥೆಯೂ ಅವರದೇ. ಅವರ ಬದುಕಿನ ಬಿಡಿ ಬರಹಗಳ ಕಟ್ಟು 'ಅನಾತ್ಮ ಕಥನ' ಆತ್ಮಚರಿತ್ರೆಯ ಒಂದು ಪ್ರಸಂಗ ಸಿನಿಮಾ ಆಗಲಿದೆ. ಚಿತ್ರಕಥೆ, ಸಂಭಾಷಣೆ ಅವರದೇ.

ನಿಖಿಲ್ ಮಂಜಯ್ಯ ಮುಖ್ಯಪಾತ್ರದಲ್ಲಿ ನಟಿಸುತ್ತಿದ್ದಾರೆ. ಗಿರಿಜಾ ಲೋಕೇಶ್ ಅಜ್ಜಿಯ ಪಾತ್ರವನ್ನು ಪೋಷಿಸುತ್ತಿದ್ದಾರೆ. ಮುದ್ದು ಮಗುವೊಂದು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಲಿದೆ. ಉಳಿದಂತೆ ರಂಗಭೂಮಿ ಕಲಾವಿದರು ತಾರಾಗಣದಲ್ಲಿದ್ದಾರೆ. 'ನಾವು ಸ್ಟಾರ್‌ಗಳಿಗೆ ಹೋಗಿಲ್ಲ' ಎನ್ನುವ ಎಚ್ಚೆಸ್ವಿ – 'ಎಲ್ಲರೂ ನೋಡುವಂಥ ಸಿನಿಮಾ ಮಾಡುವ ಆಸೆಯಿದೆ. ಕನ್ನಡ ಭಾಷೆಯ ಸೂಕ್ಷ್ಮಗಳು ಹಾಗೂ ನೋಡುವ ಅನುಭವದ ಸೂಕ್ಷ್ಮಗಳಿಗೆ ಸ್ಪಂದಿಸುವಂತೆ ಚಿತ್ರವನ್ನು ರೂಪಿಸುವ ಪ್ರಯತ್ನ ನನ್ನದು' ಎನ್ನುತ್ತಾರೆ.

ಉಪಾಸನಾ ಮೋಹನ್ 'ಹಸಿರು ರಿಬ್ಬನ್'ಗೆ ಸಂಗೀತ ನೀಡುತ್ತಿದ್ದಾರೆ. ಈ ಮುನ್ನ ಎಚ್ಚೆಸ್ವಿಯವರ ಗೀತೆಗಳು ಸೇರಿದಂತೆ ವಿವಿಧ ಕವಿಗಳ ಭಾವಗೀತೆಗಳ ಆಲ್ಬಂಗಳಿಗೆ ಮೋಹನ್ ಸಂಗೀತ ಸಂಯೋಜಿಸಿದ್ದಾರೆ. ಸಿನಿಮಾ ಸಂಗೀತ ಅವರಿಗೆ ಹೊಸ ಅನುಭವ.

ಆಗಸ್ಟ್‌ನಲ್ಲಿ 'ಹಸಿರು ರಿಬ್ಬನ್' ಮುಹೂರ್ತ ನಡೆಯಲಿದೆ. ಅದರ ಬೆನ್ನಿಗೇ ಚಿತ್ರೀಕರಣ ನಡೆಸಲು ಸಿದ್ಧತೆ ನಡೆದಿದೆ. ಅಕ್ಟೋಬರ್ ವೇಳೆಗೆ ಚಿತ್ರ ಮುಗಿಸುವ ಡೆಡ್‌ಲೈನ್ ನಿರ್ದೇಶಕರದು.

'ಸಿನಿಮಾ ನಿರ್ದೇಶನದ ಆಸೆ ಮೊದಲಿನಿಂದಲೂ ಇತ್ತು. ಈಗ ಸಂದರ್ಭ ಒದಗಿಬಂದಿದೆ' ಎನ್ನುವ ಕವಿಗೆ, ಈ ಪ್ರಯತ್ನ ತಮ್ಮ ಸೃಜನಶೀಲ ಬದುಕಿನ ಹೊಸ ಸಾಹಸ ಎನ್ನಿಸಿದೆ. ಎಚ್ಚೆಸ್ವಿ ಅವರ ಈವರೆಗಿನ ರಸಯಾತ್ರೆಯನ್ನು ನೋಡಿದರೆ, ಬೇರೆ ಬೇರೆ ಮಾಧ್ಯಮಗಳಲ್ಲಿ ಕೆಲಸ ಮಾಡಿ ಮತ್ತೆ ಕಾವ್ಯಕ್ಕೆ ಮರಳುವುದರಲ್ಲಿ ಅವರಿಗೆ ನಂಬಿಕೆ ಇದ್ದಂತಿದೆ. ಕವಿಯೊಬ್ಬ ಹಲವು ಕ್ಷೇತ್ರಗಳಲ್ಲಿ ತೊಡಗಿಕೊಳ್ಳುವುದರಿಂದ ಅಂತಿಮ ಲಾಭವಾಗುವುದು ಕವಿತೆಗೇ! ಹಾಗಾಗಿ ಸಹೃದಯರು 'ಹಸಿರು ರಿಬ್ಬನ್' ಮೂಲಕ ಒಳ್ಳೆಯ ಸಿನಿಮಾವನ್ನು ಹಾಗೂ ಸಿನಿಮಾ ನಂತರ ಕಾವ್ಯದ ಅಮೃತವರ್ಷವನ್ನೂ ನಿರೀಕ್ಷಿಸಬಹುದು.

**ಚಿತ್ರ: ಡಿ.ಎಂ. ಘನಶ್ಯಾಮ**